ಧಾರಾವಾಹಿ ಲೇಖನ

ರಾಮಕೃಷ್ಣ ಮಹಾಸಂಘದ ಗುರು ಪರಂಪರೆ

ಮೀನಾ ವಿ.

(ಹಿಂದಿನ ಸಂಚಿಕೆಯಿಂದ)

ಸ್ವಾಮಿ ವೀರೇಶ್ವರಾನಂದಜಿ ಮಹಾರಾಜ್

ಇವರ ಹಿಂದಿನ ಹೆಸರು ಪಾಂಡುರಂಗ ಪ್ರಭು ಎಂದು. ಇವರು ೧೮೮೮ರಲ್ಲಿ ಚೆನ್ನೈನಲ್ಲಿ ಜನ್ಮ ತಾಳಿದರು. ಅವರ ಸೋದರ ಮಾವ ಐದು ವರ್ಷದ ಇವರನ್ನು ಕರೆದುಕೊಂಡು ಸ್ವಾಮಿ ವಿವೇಕಾನಂದರನ್ನು ಸಂದರ್ಶಿಸಲು ಹೋಗಿದ್ದರಂತೆ. ಮುಂದೆ ಅವರು ಸ್ನೇಹಿತನೊಬ್ಬನಿಂದ ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯ ಪುಸ್ತಕವನ್ನು ಪಡೆದು, ಓದಿ ಪ್ರಭಾವಿತರಾದರು. ತಮ್ಮ ೨೪ನೆಯ ವಯಸ್ಸಿನಲ್ಲಿ ರಾಮಕೃಷ್ಣ ಮಹಾಸಂಘವನ್ನು ಸೇರಿದ ಸ್ವಾಮಿಗಳು ಶ್ರೀಮಾತೆ ಶಾರದಾದೇವಿಯವರಿಂದ ಮಂತ್ರದೀಕ್ಷೆ ಪಡೆದರು.

ಚೆನ್ನೈ ಮಠದಲ್ಲಿ ಅವರು ಅನೇಕ ಕಾರ್ಯಗಳನ್ನು ಮಾಡುತ್ತಿದ್ದರು. ಸ್ವಾಮಿ ಬ್ರಹ್ಮಾನಂದಜಿ ಅವರಿಂದ ಭುವನೇಶ್ವರದ ಮಠದಲ್ಲಿ ಸಂನ್ಯಾಸ ದೀಕ್ಷೆಯನ್ನು ಪಡೆದರು. ಅತ್ಯಂತ ಮೇಧಾವಿಗಳಾಗಿದ್ದ ಸ್ವಾಮಿಗಳು ಅದ್ವೈತಾಶ್ರಮದ ಅಧ್ಯಕ್ಷರಾಗಿ ರಾಮಕೃಷ್ಣ–ವಿವೇಕಾನಂದ–ವೇದಾಂತ ಸಾಹಿತ್ಯ ಪ್ರಚಾರಕ್ಕಾಗಿ ಬಹುವಾಗಿ ಶ್ರಮಿಸಿದರು. ನಂತರ ಮಹಾ ಸಂಘದ ಪ್ರಧಾನ ಕಾರ್ಯದರ್ಶಿಗಳಾಗಿ, ಪರಿಹಾರ ಕಾರ್ಯ ಮೊದಲಾದ ಯೋಜನೆಗಳನ್ನು ಸಮರ್ಪಕವಾಗಿ ನಿರ್ವಹಿಸಿ, ಯಶಸ್ಸು ಪಡೆದರು. ಎಂತಹ ವಿಷಮ ಪರಿಸ್ಥಿತಿಯಲ್ಲಿಯೂ ಅವರ ಸಹಿಷ್ಣುತೆ ಮತ್ತು ಮಾನಸಿಕ ಸಮತೋಲನವನ್ನು ಕಂಡು ಎಲ್ಲರೂ ವಿಸ್ಮಿತರಾಗುತ್ತಿದ್ದರು. ಅವರ ಬುದ್ಧಿಶಕ್ತಿ ಮತ್ತು ಸಂಘದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸುವ ಕುಶಲತೆ ಅಮೋಘವಾದದು!

೧೯೬೬ ರಲ್ಲಿ ಪರಮಾಧ್ಯಕ್ಷರಾದ ಸ್ವಾಮಿ ವೀರೇಶ್ವರಾನಂದಜಿ ಅವರು ೧೯ ವರ್ಷಗಳಷ್ಟು ದೀರ್ಘ ಕಾಲ ಸಾವಿರಾರು ಸಾಧಕರ ಹೃದಯಗಳನ್ನು ಪ್ರೀತಿ, ಸ್ನೇಹ ಮತ್ತು ಆಶೀರ್ವಾದಗಳಿಂದ ತುಂಬಿದರು. ಎಲ್ಲ ವಯಸ್ಸಿನ ಭಕ್ತರು, ಸಾಧು ಬ್ರಹ್ಮಚಾರಿಗಳು ಇವರ ಪವಿತ್ರ ಪ್ರೇಮಗಂಗೆಯಲ್ಲಿ ಮಿಂದು ಧನ್ಯರಾದರು.

ಇವರಿಗಿಂತ ಹಿರಿಯರಾದ ಸ್ವಾಮಿ ಅಭಯಾನಂದಜಿ (ಭರತ್ ಮಹಾರಾಜ್) ಹೀಗೆ ಹೇಳುತ್ತಿದ್ದರು: "ಪ್ರಭು ಮಹಾರಾಜರದು ಅತ್ಯಂತ ಶಿಸ್ತುಬದ್ಧವಾದ ಜೀವನ. ಅವರಿಗೆ ಸಂಘದ ಪ್ರತಿಯೊಬ್ಬರ ಮೇಲೂ ಮಮತೆಯಿತ್ತು..... ಅವರು ನನಗಿಂತ ಒಂದೆರಡು ವರ್ಷ ಚಿಕ್ಕವರು. ಆದರೂ ಸದಾ ಕಾಲಕ್ಕೂ ಅವರ ವ್ಯಕ್ತಿತ್ವದಲ್ಲಿದ್ದ ಗಾಂಭೀರ್ಯ, ಶ್ರದ್ಧೆ, ಪ್ರೀತಿ ಮತ್ತು ಆಕರ್ಷಣೆಯನ್ನು ನಾನು ಅನುಭವಿಸಿದ್ದೇನೆ."

ಸದಾ ಆನಂದಮಯರಾಗಿರುವುದು ಅವರ ಸ್ವಭಾವವಾಗಿತ್ತು. ಸ್ವಾಮಿ ವಿವೇಕಾನಂದರ ದರಿದ್ರನಾರಾಯಣ ಸೇವೆಯನ್ನು ಹೃತ್ಪೂರ್ವಕವಾಗಿ ಆಚರಣೆಗೆ ತಂದವರು ಸ್ವಾಮಿ ವೀರೇಶ್ವರಾನಂದಜಿ ಅವರು. ಅದರಂತೆಯೇ ಗ್ರಾಮ ಅಭಿವೃದ್ಧಿಗಾಗಿ **'ಪಲ್ಲಿಮಂಗಲ್'** ಎಂಬ ಯೋಜನೆಯನ್ನು ಆರಂಭಿಸಿದರು. ಕಾಲೇಜು ವಿದ್ಯಾರ್ಥಿಗಳು ಗೃಹಸ್ಥರಾಗುವುದಕ್ಕೆ ಮುಂಚೆ ಕನಿಷ್ಠ ಒಂದು ವರ್ಷವಾದರೂ ನಮ್ಮ ದೇಶದ ದೀನದಲಿತರ, ನಿರಕ್ಷರಸ್ಥರ, ದರಿದ್ರರ ಸೇವೆ ಮಾಡಬೇಕು ಎಂದು ಕರೆ ಕೊಟ್ಟಿದ್ದರು.

ಸ್ವಾಮಿ ಬ್ರಹ್ಮಾನಂದಜಿ ಅವರನ್ನು ಬಿಟ್ಟರೆ, ಅತ್ಯಂತ ದೀರ್ಘಕಾಲ ರಾಮಕೃಷ್ಣ ಮಹಾಸಂಘದ ಸಾರಥ್ಯವನ್ನು ವಹಿಸಿದವರೆಂದರೆ ಸ್ವಾಮಿ ವೀರೇಶ್ವರಾನಂದಜಿ ಅವರು.

ಸ್ವಾಮಿ ಗಂಭೀರಾನಂದಜಿ ಮಹಾರಾಜ್

ಸ್ವಾಮಿ ಗಂಭೀರಾನಂದಜಿ ಅವರ ಪೂರ್ವಾಶ್ರಮದ ಹೆಸರು ಯತೀಂದ್ರನಾಥ ದತ್ತ. ೧೮೯೯ರಲ್ಲಿ ಜನಿಸಿದ ಇವರಲ್ಲಿ ಬಾಲ್ಯದಲ್ಲಿಯೇ ಆಧ್ಯಾತ್ಮಿಕ ಪ್ರವೃತ್ತಿ ಕಂಡು ಬರುತ್ತಿತ್ತು. ಅವರದು ಶಾಂತ, ಧೀರ, ಗಂಭೀರ ವ್ಯಕ್ತಿತ್ವ. ೧೯೨೩ರಲ್ಲಿ ಮಹಾಸಂಘವನ್ನು ಸೇರಿದ ಇವರು ಸ್ವಾಮಿ ಶಿವಾನಂದಜಿ ಮಹಾರಾಜರಿಂದ ಮಂತ್ರದೀಕ್ಷೆ ಮತ್ತು ಸಂನ್ಯಾಸ ದೀಕ್ಷೆಗಳನ್ನು ಪಡೆದು ಧನ್ಯರಾದರು.

ಮಹಾಸಂಘದಲ್ಲಿ ಅನೇಕ ಕಾರ್ಯಗಳನ್ನು ನಿರ್ವಹಿಸಿದ ಅವರು ಸಂಸ್ಕೃತ ಮತ್ತು ವೇದಾಂತಗಳಲ್ಲಿ ವಿದ್ವಾಂಸರು ಕೂಡ. ಸ್ವಾಮಿ ವಿವೇಕಾನಂದರು ಮತ್ತು ಶ್ರೀಮಾತೆ ಶಾರದಾದೇವಿಯರ ಜೀವನವನ್ನು ರಚಿಸಿದ ಸ್ವಾಮಿಗಳು, ಉಪನಿಷತ್ತುಗಳ ಮೇಲೆ ಶ್ರೀಶಂಕರಾಚಾರ್ಯರ ಭಾಷ್ಯವನ್ನು ಬಂಗಾಳಿಗೂ, ಇಂಗ್ಲಿಷಿಗೂ ಅನುವಾದಿಸಿದ್ದಾರೆ. ಇಂಗ್ಲಿಷಿನಲ್ಲಿ ಅವರು ರಚಿಸಿರುವ 'ರಾಮಕೃಷ್ಣ ಮಹಾಸಂಘದ ಇತಿಹಾಸ' ಪ್ರಮಾಣೀಭೂತವಾದ ಅಧಿಕೃತ ಗ್ರಂಥ. ಸ್ವಾಮೀಜಿಯವರು ೧೯೮೬ ರಲ್ಲಿ ಮಹಾಸಂಘದ ಹನ್ನೊಂದನೆಯ ಪರಮಾಧ್ಯಕ್ಷರಾದರು.

ಒಮ್ಮೆ ಅವರ ಕೊಠಡಿಯಿಂದ ಸಿಂಹಗರ್ಜನೆಯಂತೆ ದೊಡ್ಡ ಶಬ್ದ ಕೇಳಿಬಂತು, "ಹಾ! ನಾನು ದೇವರನ್ನು ಕಂಡಿದ್ದೇನೆ. ನೀನೂ ಕಷ್ಟಪಟ್ಟರೆ ಅತನನ್ನು ಕಾಣಬಲ್ಲೆ." ಒಳಗೆ ನೋಡಿದರೆ, ಒಬ್ಬ ಯುವಕನ ಸಂದೇಹಕ್ಕೆ ಅವರು ಕೊಟ್ಟಿದ್ದ ಉತ್ತರ ಅದು. ಆ ಯುವಕನ ಸಂಶಯ ಪೂರ್ಣವಾಗಿ ಕಳೆಯಿತು.

ಸ್ವಾಮಿಗಳು ಒಮ್ಮೆ ಅಮರನಾಥ ದರ್ಶನಕ್ಕೆ ಹೋಗಿದ್ದರು. ಅವರೊಡನೆ ಇದ್ದ ಇನ್ನೊಬ್ಬ ಸ್ವಾಮಿಗಳು ಕೇಳಿದರು, "ಅಮರನಾಥ ಲಿಂಗವನ್ನು ಮುಟ್ಟಿ ನಮಸ್ಕರಿಸುವಾಗ, ನಿಮಗಾದ ಅನುಭವವೇನು?"

ಎಂದು. ಅದಕ್ಕೆ ಸ್ವಾಮಿ ಗಂಭೀರಾನಂದಜಿ ಅವರು, "ಅಲ್ಲಿ ನಾನು ಏನನ್ನು ಕಂಡೆ, ಗೊತ್ತೆ? ಶ್ರೀರಾಮಕೃಷ್ಣರೇ ಆಸೀನರಾಗಿದ್ದುದನ್ನು ಕಂಡೆ" ಎಂದರು.

ಸ್ವಾಮಿಗಳು ಆಗಾಗ್ಗೆ ಹೇಳುತ್ತಿದ್ದರು: "ಸ್ವಾಮಿ ವಿವೇಕಾನಂದರ ಸೇವಾದರ್ಶವನ್ನು ಸಾರ್ಥಕಭಾವದಲ್ಲಿ ರೂಪುಗೊಳಿಸಿಕೊಳ್ಳಲು ನಾವು ಜ್ಞಾನ ಭಕ್ತಿ ಯೋಗ ಕರ್ಮ – ಈ ನಾಲ್ಕು ಯೋಗಗಳನ್ನೂ ಸಮನ್ವಯಗೊಳಿಸಿಕೊಳ್ಳಬೇಕು." ಸ್ವಾಮಿ ಗಂಭೀರಾನಂದಜಿ ಅವರು ೧೯೮೪ ರಲ್ಲಿ ಮಹಾಸಮಾಧಿಯನ್ನು ಹೊಂದಿದರು.

ಸ್ವಾಮಿ ಭೂತೇಶಾನಂದಜಿ ಮಹಾರಾಜ್

ಸ್ವಾಮಿ ಭೂತೇಶಾನಂದಜಿ ಅವರ ಪೂರ್ವಾಶ್ರಮದ ಹೆಸರು ವಿಜಯ ಚಂದ್ರ ರಾಯ್. ಇವರ ತಂದೆ ತಾಯಿಯರು ಧಾರ್ಮಿಕರು. ಸ್ವಾಮಿಗಳು ಚಿಕ್ಕ ವಯಸ್ಸಿನಲ್ಲಿಯೇ ಪೂಜೆ, ಜಪ, ನೈಷ್ಠಿಕ ಬ್ರಹ್ಮಚರ್ಯ ಪಾಲನೆಯಲ್ಲಿ ನಿರತರಾಗಿದ್ದರು. ಅವರ ವ್ಯಕ್ತಿತ್ವ ಪವಿತ್ರತೆ, ಭಕ್ತಿ, ವೈರಾಗ್ಯಗಳಿಂದ ತುಂಬಿ ತುಳುಕಾಡುತ್ತಿತ್ತು.

ರಾಮಕೃಷ್ಣ ಮಹಾಸಂಘದ ಸಂಪರ್ಕಕ್ಕೆ ಬಂದ ಇವರಿಗೆ ಸ್ವಾಮಿ ಶಾರದಾನಂದರಿಂದ ಮಂತ್ರದೀಕ್ಷೆಯಾಯಿತು. ಅವರು ತಮ್ಮ ಗುರುಗಳಂತೆ ಸದಾ ಶಾಂತಚಿತ್ತರೂ, ಪ್ರೇಮಸ್ವರೂಪರೂ ವಿಚಾರವಂತರೂ ಆಗಿದ್ದರು. ಪ್ರತಿಯೊಂದು ವಿಚಾರಕ್ಕೂ ಸಂಪೂರ್ಣ ಗಮನ ಕೊಡುವುದು, ಅನುಕಂಪೆ – ಇವು ಅವರ ಸಹಜ ಗುಣಗಳು.

ಇವರು ಸ್ವಾಮಿ ಶಾರದಾನಂದಜಿ ಮಹಾರಾಜರಿಂದ ಮಂತ್ರದೀಕ್ಷೆ ಪಡೆದರು. ಬೇಲೂರು ಮಠದಲ್ಲಿ ಶಾಸ್ತ್ರಗ್ರಂಥಗಳ ಅಧ್ಯಯನದಲ್ಲಿ ಅವರು ನಿರತರಾಗಿದ್ದರು. ೧೯೨೮ ರಲ್ಲಿ ಸಂನ್ಯಾಸ ದೀಕ್ಷೆಯನ್ನು ಪಡೆದ ಇವರು ಸುಮಾರು ೨ ವರ್ಷ ಕಾಲ ಹಿಮಾಲಯದ ಉತ್ತರಕಾಶಿಯಲ್ಲಿ ತಪಸ್ಸು ಮಾಡಿದರು. ರಾಮಕೃಷ್ಣ ಮಹಾಸಂಘದಲ್ಲಿ ಅನೇಕ ಗುರುತರ ಜವಾಬ್ದಾರಿಗಳನ್ನು ವಹಿಸಿದ ಇವರು, ೧೯೬೬ ರಿಂದ ೧೯೭೫ ರವರೆಗೆ ಬೇಲೂರು ಮಠದಲ್ಲಿ ಮಹಾಸಂಘದ ಸಹ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದರು. ೧೯೭೫ ರಲ್ಲಿ ಉಪಾಧ್ಯಕ್ಷರಾದ ಅವರು ಕಾಂಕುರ್‌ಗಾಚಿಯ ಮಠದಲ್ಲಿ ನೀಡುತ್ತಿದ್ದ, 'ರಾಮಕೃಷ್ಣ ವಚನವೇದ' ದ ಮೇಲಿನ ಉಪನ್ಯಾಸಗಳು ಅತ್ಯಂತ ಪ್ರಸಿದ್ಧವಾದುವು.

೧೯೮೪ ರಲ್ಲಿ ರಾಮಕೃಷ್ಣ ಮಹಾಸಂಘದ ಪರಮಾಧ್ಯಕ್ಷರಾದ ಸ್ವಾಮಿಗಳು ಪ್ರತಿಯೊಬ್ಬರನ್ನೂ ವಾತ್ಸಲ್ಯದಿಂದ ಕಾಣುತ್ತಿದ್ದರು. ಆದ್ದರಿಂದಲೇ ಪ್ರತಿಯೊಬ್ಬರೂ ಅವರನ್ನು ಆಶ್ರಯಿಸಿ, ಸಹಾಯವನ್ನು ಪಡೆಯುತ್ತಿದ್ದರು. ಅವರು ಹೇಳುತ್ತಿದ್ದರು, " ಯಾವಾಗಲೂ ಸತ್ಯವನ್ನೇ ಹೇಳು. ಆದರೆ ಕಟುವಾಗಿ ಹೇಳಬೇಡ. ಕಟುವಾಗಿ ಹೇಳುವುದು ಪಾಪ. ಅದು ಕೇವಲ ನಮ್ಮ ಅಹಂಕಾರ ಪ್ರದರ್ಶನವಾಗುತ್ತದೆ. ಹಾಗೆಂದು ಅಸತ್ಯದೊಂದಿಗೆ ರಾಜಿ ಮಾಡಿಕೊಳ್ಳಬಾರದು."

ಸ್ವಾಮಿಗಳು ಮಲೇಷಿಯಾ, ಫಿಜಿ, ಜಪಾನ್, ಸಿಂಗಪೂರ್, ಆಸ್ಟ್ರೇಲಿಯಾ, ಇಂಗ್ಲೆಂಡ್, ಅಮೆರಿಕ, ಕೆನಡಾ ಮುಂತಾದ ದೇಶಗಳಿಗೆ ಹೋಗಿ, ಶ್ರೀರಾಮಕೃಷ್ಣರ ಮತ್ತು ವೇದಾಂತದ ಸಂದೇಶವನ್ನು ಸಾರಿದ್ದಾರೆ.

ಪ್ರಖ್ಯಾತ ಪಂಡಿತರಾದ ಡಾ. ತ್ರಿಗುಣ ಸೇನ್ ಅವರು ಹಲವಾರು ಬಾರಿ ಸ್ವಾಮಿಗಳನ್ನು ಸಂದರ್ಶಿಸಲು ಹೋಗುತ್ತಿದ್ದರು. ಯಾರಾದರೂ ಪ್ರಶ್ನಿಸಿದರೆ, ಅವರು ಹೇಳುತ್ತಿದ್ದರು: "ನಾನೇನು ಇವರ ಬಳಿ ಸುಮ್ಮನೆ ಹೋಗಿ ಬರುತ್ತಿದ್ದೇನೆಯೇ? ಅವರಲ್ಲಿ ಒಂದು ಜ್ಞಾನದ ನಿಧಿಯೇ ಇದೆ." ಒಬ್ಬ ಪಾಶ್ಚಾತ್ಯ ಭಕ್ತೆ ಸ್ವಾಮಿ ಭೂತೇಶಾನಂದಜಿ ಅವರ ಬಗ್ಗೆ ಹೀಗೆ ಹೇಳಿದ್ದಾರೆ: "ಇವರು ಶ್ರೀರಾಮಕೃಷ್ಣರ ಮೇಲಿರುವ ಮಂದಹಾಸಯುಕ್ತವಾದ, ಬೆಳಗುತ್ತಿರುವ ಹೊದಿಕೆ ಎಂದು ನಾನು ಯಾವಾಗಲೂ ಭಾವಿಸುತ್ತೇನೆ. ಅವರ ಅಪಾರ ಪ್ರೀತಿ, ಪವಿತ್ರತೆ, ನಮ್ರತೆ, ವ್ಯಾವಹಾರಿಕ ಚತುರತೆ ಮುಂತಾದ ಗುಣಗಳನ್ನು ಇನ್ನೊಂದೆಡೆ ಕಾಣುವುದು ದುರ್ಲಭ."

ಸ್ವಾಮಿ ಭೂತೇಶಾನಂದಜಿ ಅವರು ೧೯೯೮ ರಲ್ಲಿ ಮಹಾಸಮಾಧಿಯನ್ನು ಹೊಂದಿದರು.

(ಮುಂದುವರಿಯುವುದು)

ನಾಲ್ಕು ವಜ್ರಗಳು

ಶಹಜಹಾನನ ರಾಜ್ಯದಲ್ಲಿ ಒಬ್ಬ ಶ್ರೀಮಂತ ಬ್ರಾಹ್ಮಣನಿದ್ದ. ಅವನ ಸಂಪತ್ತನ್ನೆಲ್ಲ ಮುಟ್ಟುಗೋಲು ಹಾಕಿಕೊಳ್ಳಲು ರಾಜ ಯೋಚಿಸಿದ. ಆ ಬ್ರಾಹ್ಮಣನನ್ನು ಕರೆದು ಹೇಳಿದ: "ನೀನು ದೊಡ್ಡ ವಿದ್ವಾಂಸನೆಂದು ಊರಿನಲ್ಲೆಲ್ಲಾ ಪ್ರಸಿದ್ಧಿ ಹೊಂದಿರುವಿ. ನನ್ನ ಮನಸ್ಸಿನಲ್ಲಿ ಮತ್ತೆ ಮತ್ತೆ ಏಳುತ್ತಿರುವ ಒಂದು ಪ್ರಶ್ನೆಯನ್ನು ನಾನು ಕೇಳುತ್ತೇನೆ. ಅದಕ್ಕೆ ನೀನು ಉತ್ತರ ಕೊಡದಿದ್ದರೆ, ನಿನ್ನನ್ನು ಢೋಂಗಿ ಎಂದು ತೀರ್ಮಾನಿಸಿ, ನಿನ್ನ ಮೇಲೆ ಕ್ರಮ ಕೈಗೊಳ್ಳುತ್ತೇನೆ." ನಂತರ ಪ್ರಶ್ನೆ ಕೇಳಿದ, " ನೋಡು, ನಮ್ಮ ರಾಜ್ಯದಲ್ಲಿ ಎಷ್ಟೊಂದು ಧರ್ಮಗಳಿವೆ. ಅದರಲ್ಲಿ ಯಾವುದು ಶ್ರೇಷ್ಠವೆಂದು ತಿಳಿಸು." ಇದರಲ್ಲಿ ಏನೋ ಕುತಂತ್ರವಿದೆ ಎಂದು ಬ್ರಾಹ್ಮಣನಿಗೆ ಅನ್ನಿಸಿತು. ಆದರೂ ಶಹಜಹಾನನ ಪ್ರಶ್ನೆಗೆ ಉತ್ತರವಾಗಿ ಒಂದು ಕತೆಯನ್ನು ಹೇಳಿದ:

ಒಬ್ಬ ರಾಜನಿಗೆ ನಾಲ್ಕು ಮಕ್ಕಳಿದ್ದರು. ಅವನ ಹತ್ತಿರ ಒಂದೇ ಒಂದು ಅಮೂಲ್ಯವಾದ ವಜ್ರ ಇತ್ತು. ರಾಜ ಕಡಿಮೆ ಬೆಲೆಯ ನಾಲ್ಕು ವಜ್ರಗಳನ್ನು ಮಾಡಿಸಿ, ಪ್ರತಿಯೊಬ್ಬನನ್ನೂ ಬೇರೆ ಬೇರೆ ಕರೆದು, ಆ ವಜ್ರವನ್ನು ಕೊಟ್ಟು, "ಅಮೂಲ್ಯ ಬೆಲೆಯ ವಜ್ರವನ್ನು ನಿನಗೆ ಮಾತ್ರ ಕೊಡುತ್ತಿದ್ದೇನೆ. ಈ ವಿಷಯವನ್ನು ನಿನ್ನಲ್ಲೇ ಗುಟ್ಟಾಗಿ ಇಟ್ಟುಕೋ, ಯಾರಿಗೂ ಹೇಳಬೇಡ." ಎಂದನು.

ಸ್ವಲ್ಪ ಹೊತ್ತು ಮೌನವಾಗಿದ್ದು, ಬ್ರಾಹ್ಮಣ ಹೇಳಿದ: " ಧರ್ಮವೂ ಆ ವಜ್ರದಂತೆಯೇ. ಯಾವ ಧರ್ಮವೂ ಇತರ ಧರ್ಮಕ್ಕಿಂತ ಹೆಚ್ಚಲ್ಲ. ಎಲ್ಲ ಧರ್ಮಗಳನ್ನು ಹುಟ್ಟಿಸಿರುವವನು ಭಗವಂತನೇ. ಆದರೆ ಜನರು ಮಾತ್ರ ಅವರವರ ಧರ್ಮವೇ ಶ್ರೇಷ್ಠವೆಂದು ಭಾವಿಸುತ್ತಾರೆ. ಪ್ರತಿಯೊಂದು ಧರ್ಮಕ್ಕೂ ಅದರದೇ ಆದ ವೈಶಿಷ್ಟ್ಯ, ಹೆಚ್ಚುಗಾರಿಕೆ ಇದೆ." ಬ್ರಾಹ್ಮಣನ ಉತ್ತರದಿಂದ ಸಂತುಷ್ಟನಾದ ಶಹಜಹಾನ್ ಅವನನ್ನು ಸನ್ಮಾನಿಸಿ ಕಳಿಸಿಕೊಟ್ಟ. **(ಸಂಗ್ರಹ: ಸ್ವಾಮಿ ಶಾಂತಿನಾಥಾನಂದ)**